# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**Misc No. 06/2015**

**PW: 1**

**ದಿ: 29-11-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಶ್ರೀ: ಎಸ್.ಜಿ.ಕೆ ವಕೀಲರಿಂದ:**

ಅಸಲು ದಾವೆ ನಂ. **194/1994** ನ್ನು **1** ನೇ ಎದುರುದಾರ ದಾಖಲಿಸಿದ್ದ. ಸದರಿ ದಾವೆಯನ್ನು ಪಾಲು ವಾಟ್ನಿ ಕೋರಿ ದಾಖಲಿಸಿದ್ದರು. ಬಯ್ಯರ ಸರ್ವೆ ನಂ. **131/1** ಎ, ಬೂದಿಹಾಳದಲ್ಲಿಯ **24** ಎಕರೆ, ಇಂಡಿ ಊರಲ್ಲಿ ಸರ್ವೆ ನಂ. **528** ಒಂದು ಮನೆ ಮತ್ತು ಇನ್ನೊಂದು ಮನೆ ಇದ್ದು, ಅದರ ನಂಬರ ಮಾಹಿತಿ ಇಲ್ಲ. ಸದರಿ ಆಸ್ತಿಗಳ ಕುರಿತು ಅಸಲು ದಾವೆಯನ್ನು ದಾಖಸಲಾಗಿತ್ತು. ಸದರಿ ದಾವೆ ರಾಜಿಯಲ್ಲಿ ಮುಕ್ತಾಯಗೊಂಡಿತ್ತು ಎಂದರೆ ಸರಿ. ಸದರಿ ದಾವೆ ದಿಃ **22.07.1995** ರಂದು ರಾಜಿಯಾಗಿತ್ತು ಎಂದರೆ ಸರಿ. ಸದರಿ ರಾಜಿ ಪ್ರಕಾರ ಬೂದಿಹಾಳ ಸರ್ವೆ ನಂಬರದಲ್ಲಿ **16** ಎಕರೆ **4** ನೇ ಎದುರುದಾರನಿಗೆ, **7** ಎಕರೆ **1** ನೇ ಎದುರುದಾರನಿಗೆ, ಇನ್ನೊಂದು ಮನೆ **4** ನೇ ಎದುರುದಾರನಿಗೆ, ಸರ್ವೆ ನಂ. **528** ಅರ್ಧ ಪಾಲು ನನ್ನ ಭಾಗಕ್ಕೆ, ಇನ್ನೂ ಅರ್ಧ **1** ನೇ ಎದುರುದಾರ ಪಾಲಿಗೆ, ಬುಯ್ಯರನಲ್ಲಿರುವ **12** ಎಕರೆ ಜಮೀನು ನನ್ನ ಪಾಲಿಗೆ, ಇನ್ನೊಂದು ಪ್ಲಾಟ **1** ನೇ ಎದುರುದಾರನಿಗೆ ಬಂದಿತ್ತು, ಅದರ ನಂಬರ ಮಾಹಿತಿ ಇಲ್ಲ. ಸದರಿ ರಾಜಿ ಪ್ರಕಾರ **1** ಮತ್ತು **4** ನೇ ಎದರುದಾರರು ತಮ್ಮ ಪಾಲಿಗೆ ಬಂದ ಆಸ್ತಿಗಳನ್ನು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡು ಪ್ರತ್ಯೇಕ್ಷ ಕಬ್ಜಾ ವಹಿವಾಟಿಯಲ್ಲಿ ಇದ್ದು ಅನುಭವಿಸುತ್ತಾ ಬಂದಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನನ್ನು ಹೊರತುಪಡಿಸಿ ಅಂತಾ ನುಡಿಯುತ್ತಾರೆ. ರಾಜಿ ಮಾಡಿಕೊಂಡ ದಿನದಿಂದು ನಾನು ಸಹ ನ್ಯಾಯಾಲಯದಲ್ಲಿ ಹಾಜರಿದ್ದೆ ಎಂದರೆ ಸರಿ. ರಾಜಿ ಅರ್ಜಿಯನ್ನು ಕನ್ನಡದಲ್ಲಿ ಬರೆಯಲಾಗಿತ್ತು ಎಂದರೆ ಸಾಕ್ಷಿ ನನಗೆ ರಾಜಿ ಅರ್ಜಿಯನ್ನು ತೋರಿಸಿರಲಿಲ್ಲ, ಒತ್ತಾಯ ಪೂರ್ವಕವಾಗಿ ನನಗೆ ಭಾಗ ನೀಡುತ್ತೇವೆ ಅಂತಾ ನನ್ನ ಸಹಿ ಪಡೆದುಕೊಂಡಿದ್ದರು ಅಂತಾ ನುಡಿಯುತ್ತಾರೆ. ರಾಜಿ ಅರ್ಜಿಯ ವಿಷಯವನ್ನು ನ್ಯಾಯಾಧೀಶರು ಆ ದಿನ ನನಗೆ ಓದಿ ಹೇಳಿರಲಿಲ್ಲ. ಸದರಿ ರಾಜಿ ಅರ್ಜಿಯನ್ನು ಖೊಟ್ಟಿ ರೀತಿಯಿಂದ ನನ್ನ ಸಹಿ ಪಡೆದುಕೊಂಡಿದ್ದರು ಎಂದರೆ ಸರಿ.

ನನ್ನ ಹೆಂಡತಿ ಹೆಸರು ಶೋಬಾ ಅಂತಾ ಇರುತ್ತದೆ. ಇನ್ನೊಬ್ಬ ಹೆಂಡತಿಯ ಹೆಸರು ದ್ರಾಕ್ಷಯಣಿ ಅಂತಾ ಇರುತ್ತದೆ. ನನ್ನ **2** ನೇ ಹೆಂಡತಿಗೆ ಒಂದು ಗಂಡು, ಒಂದು ಹೆಣ್ಣು ಮಕ್ಕಳು ಇರುತ್ತಾರೆ. ಶೋಬಾ

ಅವರೊಂದಿಗೆ

ವಿವಾಹ ವಿಚ್ಛೇದನೆ ಪಡೆದುಕೊಂಡು ದ್ರಾಕ್ಷಯಣಿಯೊಂದಿಗೆ **2** ನೇ ಮದುವೆ ಮಾಡಿಕೊಂಡಿದ್ದಿರೂ ಅಥವಾ ಹಾಗೆಯೇ **2** ನೇ ಮದುವೆ ಮಾಡಿಕೊಂಡಿದ್ದಿರೊ ಎಂಬ ಪ್ರೆಶ್ನೆಗೆ ಸಾಕ್ಷಿ ಶೋಬಾಳೊಂದಿಗೆ ನನ್ನ ಬಾಲ್ಯ ವಿವಾಹ ಆಗಿತ್ತು ಅಂತಾ ನುಡಿಯುತ್ತಾರೆ. ಶೋಬಾಳೊಂದಿಗೆ ಆದ ವಿವಾಹ ಶೂನ್ಯವಿವಾಹ ಅಂತಾ ಕೋರಿ ನಾನು ಅಲ್ಲಿಯವರೆಗೊ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. **1995** ನೇ ಸಾಲಿನಲ್ಲಿ ನನ್ನ **2** ನೇ ಮದುವೆ ಆಗಿತ್ತು ಎಂದರೆ ಸಾಕ್ಷಿ **1993** ನೇ ಸಾಲಿನಲ್ಲಿ ಆಗಿತ್ತು ಅಂತಾ ನುಡಿಯುತ್ತಾರೆ. **1993** ನೇ ಸಾಲಿನಿಂದ ನಮ್ಮ ಕುಟುಂಬದಲ್ಲಿ ನನ್ನ ಮತ್ತು ಶೋಬಾಳ ನಡುವೆ ವಿವಾದ ಇತ್ತು ಎಂದರೆ ಸರಿಯಲ್ಲ. **1995** ನೇ ಸಾಲಿನಲ್ಲಿ ಆದ ರಾಜಿ ಪ್ರಕಾರ ನನ್ನ ಪಾಲಿಗೆ ಬಂದ ಆಸ್ತಿಯನ್ನು ನನ್ನ ಹೆಂಡತಿ ಶೋಬಾಳಿಗೆ ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಒತ್ತಾಯಪೂರ್ವಕವಾಗಿ ರಾಜಿ ಅರ್ಜಿಗೆ ನನ್ನ ಸಹಿ ಪಡೆದುಕೊಂಡಿದ್ದರು ಅಂತಾ ನುಡಿಯುತ್ತಾರೆ. **1995** ನೇ ಸಾಲಿನಲ್ಲಿ ರಾಜಿ ಆದ ನಂತರ ಶೋಬಾ ಸದರಿ ಆಸ್ತಿಗಳಿಗೆ ತಮ್ಮ ಹೆಸರನ್ನು ಖಾತೆ ಮಾಡಿಸಿಕೊಂಡಿದ್ದರು ಎಂದರೆ ಸಾಕ್ಷಿ ಖೊಟ್ಟಿಯಾಗಿ ಮಾಡಿಕೊಂಡಿದ್ದರು ನನ್ನ ಗಮನಕ್ಕೆ ಬಂದಿರಲಿಲ್ಲ ಅಂತಾ ನುಡಿಯುತ್ತಾರೆ. ನನ್ನ ಅರ್ಜಿಯಲ್ಲಿ ಶೋಬಾ ಸದರಿ ರಾಜಿ ಪ್ರಕಾರ ತನ್ನ ಹೆಸರನ್ನು ಆಸ್ತಿಗಳ ದಾಖಲೆಗಳಲ್ಲಿ ನೋಂದಾಯಿಸಿಕೊಂಡು ಸದರಿ ಆಸ್ತಿಗಳನ್ನು ಮಾರಾಟಾ ಮಾಡಿದ್ದಳು ಅಂತಾ ಹೇಳಿ ಬರೆಸಿರುತ್ತೇನೆ ಎಂದರೆ ಸಾಕ್ಷಿ ಸದರಿ ವಿಷಯ ನನಗೆ ಗೊತ್ತಾದ ನಂತರ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ ಅಂತಾ ನುಡಿಯುತ್ತಾರೆ. ದಿಃ **09/17–05–2005** ರಂದು **6** ನೇ ಎದುರುದಾರರಿಗೆ **10** ಎಕರೆ ಜಮೀನನ್ನು ಮಾರಾಟ ಮಾಡಿದ್ದರು. ಇನ್ನೂ **2** ಎಕರೆ ಜಮೀನನ್ನು **7** ನೇ ಎದುರುದಾರರಿಗೆ ಮಾರಾಟ ಮಾಡಿದ್ದರು. **2005** ನೇ ಸಾಲಿನಲ್ಲಿ ಖೊಟ್ಟಿ ರೀತಿಯಿಂದ ನನ್ನ ಸಹಿಯನ್ನು ರಾಜಿ ಅರ್ಜಿಗೆ ಪಡೆದುಕೊಂಡು ರಾಜಿ ಮಾಡಿಕೊಂಡಿರುತ್ತಾರೆ ಅಂತಾ ತಿಳಿದ ನಂತರ ನಾನು ಮೂಲತಃ ಅಸಲು ದಾವೆ ನಂ. **136/2005** ಆ ನಂತರ ಅದನ್ನು ಮರು ನಂ. **77/2007** ಅಂತಾ ದಾಖಲು ಮಾಡಿದ್ದೆ ಅಂತಾ ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು ಎಲ್ಲಿಯೋ ಸದರಿ ರಾಜಿ ಅರ್ಜಿ ಖೊಟ್ಟಿಯಾಗಿ ಮಾಡಿಕೊಂಡಿದ್ದರೂ ಅಂತಾ ಹೇಳಿರಲಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆ ನನ್ನ ವಿರುದ್ಧ ತೀರ್ಪು ಆಗಿತ್ತು ಎಂದರೆ ಸರಿ. ಅದರ ಮೇಲೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿ ಸಹ ನನ್ನ ವಿರುದ್ಧ ತೀರ್ಪು ಆಗಿತ್ತು ಎಂದರೆ ಸಾಕ್ಷಿ ಮರು ವಿಚಾರಣೆಗೆ ಆದೇಶವಾಗಿತ್ತು ಅಂತಾ ನುಡಿಯುತ್ತಾರೆ. ಮರು ವಿಚಾರಣೆಗೆ ಆದೇಶವಾಗಿತ್ತು ಅಂತಾ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಈ ಅರ್ಜಿಯಲ್ಲಿ **1995** ನೇ ಸಾಲಿನಲ್ಲಿ ಆದ ರಾಜಿ ಖೊಟ್ಟಿ ಆಗಿರುತ್ತದೆ ಅಂತಾ ಹೇಳಿ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ನನ್ನ ಹೆಂಡತಿ ಶೋಬಾಳ ವಿರುದ್ಧ ದ್ವೇಷ ಸಾದಿಸಲು ಈ

ಖೊಟ್ಟಿ ಅರ್ಜಿಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಶೋಬಾ ನನ್ನ ಅಕ್ಕನ

ಮಗಳು ಎಂದರೆ ಸರಿ. ಶೋಬಾ ಇಂಡಿಯಲ್ಲಿ ವಾಸವಾಗಿರುತ್ತಾಳೆ ಎಂದರೆ ಮಾಹಿತಿ ಇಲ್ಲ. ಸದರಿ ಶೋಬಾಳಿಗೆ ಮಕ್ಕಳು ಆಗಿಲ್ಲ ಎಂದರೆ ಸರಿ. ಅವಳೊಂದಿಗೆ ನಾನು ಸಂಸಾರ ಮಾಡುವುದಿಲ್ಲ ಎಂದರೆ ಸಾಕ್ಷಿ ನನ್ನೊಂದಿಗೆ ಸದರಿ ಶೋಬಾ ಇರುವುದಿಲ್ಲ, ಹಾಗಾಗಿ ಸಂಸಾರ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಅಂತಾ ನುಡಿಯುತ್ತಾರೆ. ಸದರಿ ಶೋಬಾಳಿಗೆ ಉಪ ಜೀವನಕ್ಕಾಗಿ ಸುಮಾರು **4** ಲಕ್ಷ ಹಣ **1993** ನೇ ಸಾಲಿನಲ್ಲಿ ನೀಡಿರುತ್ತೇನೆ. ಶೋಬಾಳಿಗೆ ಉಪ ಜೀವನಕ್ಕಾಗಿ ಏನು ಕೊಡದೆ ಇರುವುದರಿಂದ ಸದರಿ ರಾಜಿ ಅರ್ಜಿಯಲ್ಲಿರುವ ಆಸ್ತಿಗಳನ್ನು ಶೋಬಾಳಿಗೆ ಕೊಡಿಸಿದ್ದರು ಎಂದರೆ ಸರಿಯಲ್ಲ. ಈ ಅರ್ಜಿಯಲ್ಲಿ ಸದರಿ ಸಂಪೂರ್ಣ ರಾಜಿ ಅರ್ಜಿಯನ್ನು ರದ್ದುಪಡಿಸುವಂತೆ ಕೋರಿರುವುದಿಲ್ಲ. ಸದರಿ ರಾಜಿ ಅರ್ಜಿ ನನ್ನ ಸಂಪೂರ್ಣ ಮಾಹಿತಿಯೊಂದಿಗೆ ಸಲ್ಲಿಸಲಾಗಿತ್ತು ಎಂದರೆ ಸರಿಯಲ್ಲ. **1995** ನೇ ಸಾಲಿನಲ್ಲಿ ನನಗೆ ಸದರಿ ರಾಜಿ ಕುರಿತು ನನಗೆ ಮಾಹಿತಿ ಬಂದಿದ್ದರು ಸಹ ಇಲ್ಲಿಯವರೆಗೊ ನಾನು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ರಾಜಿ ಅಜಿರ್ಯನ್ನಾಗಲಿ ಅಥವಾ ಆದೇಶ ಹಾಳೆಗಳನ್ನು ಈ ಅರ್ಜಿಯೊಂದಿಗೆ ಉದ್ದೇಶಪೂರ್ವಕವಾಗಿ ಸಲ್ಲಸಿರುವುದಿಲ್ಲ ಎಂದರೆ ಸರಿಯಲ್ಲ. **5** ನೇ ಎದುರುದಾರಳಿಗೆ ಕಿರುಕೂಳ ಕೊಡಬೇಕೆಂಬ ದುರುದ್ದೇಶದಿಂದ ಈ ಖೊಟ್ಟಿ ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೆ. ಸರಿ ಇದೆ.**
**ಸಹಿ/–**

**ಜೆ.ಎಂ.ಎಫ್.ಸಿ. ನ್ಯಾಯಾಲಯ**
**ಇಂಡಿ.**